**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 104 / 2016**

ಪಿರ್ಯಾದುದಾರರು : ಕುದೂರು ಪೋಲಿಸ್‌ಠಾಣೆ

**ವಿರುದ್ಧ**

**ಆರೋಪಿಗಳು : ಕೃಷ್ಣ ಮತ್ತು ಇತರರು**

**ಚಾಸಾ :- 03 / ಪ್ರಾಸಾ :- 03**

| | |
|---|---|
| ಹೆಸರು | **ಸೋಮಶೇಖರ** |
| ತಂದೆಯ / ಗಂಡನ ಹೆಸರು | **ಗೋವಿಂದಯ್ಯ** |
| ವಯಸ್ಸು | **43** |
| ಉದ್ಯೋಗ | **ವ್ಯವಸಾಯ ಮತ್ತು ಖಾಸಗಿ ಕಂಪನಿ ಉದ್ಯೋಗಿ** |
| ವಿಳಾಸ | **ಶಿವನಸಂದ್ರ ಗ್ರಾಮ** |

**ದಿನಾಂಕ: 07-01-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಆರೋಪಿತರುಗಳು ನನಗೆ ಪರಿಚಯವಿದೆ. ಚಾಸಾ-1, 2, 4 ರಿಂದ 6 ಪರಿಚಯವಿದೆ. ದಿನಾಂಕ: 25-07-2014 ರಂದು ಬೆಳಿಗ್ಗೆ 9 ಗಂಟೆಯ ಸಮಯದಲ್ಲಿ ಶಿವನಸಂದ್ರ ಸರ್ವೆ ನಂಬರ್-3 ಕ್ಕೆ ಸೇರಿದ ಕೃಷ್ಣ, ಬಸವರಾಜು, ಚಲುವಯ್ಯ, ಬೋರಮ್ಮ, ಸುನಂದ, ವಿಜಯಲಕ್ಷ್ಮೀ, ಆಂಜನಿ, ಹನುಮಂತಯ್ಯ, ಗಂಗಾಧರ, ಪೂಜರಿ ಇವರುಗಳು ಮರಗಳನ್ನು ಕಡಿಯುತ್ತಿದ್ದು, ನನ್ನ ತಮ್ಮ ಚಾಸಾ-1 ರವರು ನಾವು ಅನುಭವ ಇರುವ ಮರಗಳಲ್ಲಿ ಏಕೆ ಕಡಿಯುತ್ತಿದ್ದರು

ಎಂದು ಕೇಳಿದಾಗ ಅವರನ್ನು ಎಳೆದಾಡಿ ಹೊಡೆದಿರುತ್ತಾರೆ. ಕೃಷ್ಣ ಎಂಬುವರು ಮಚ್ಚಿನಿಂದ ಹೊಡೆದಿರುತ್ತಾರೆ. ನನ್ನ ತಮ್ಮ ಕೂಗಿಕೊಂಡಿದ್ದು, ಸದರಿ ಕೂಗು ಕೇಳಿ ನಾನು ನನ್ನ ತಂದೆತಾಯಿ ಸಹ ಹೋಗಿರುತ್ತೇವೆ. ನನ್ನನ್ನು ಹಿಡಿದು ಗಂಗಾಧರ ಎಳೆದಾಡಿ ಹೊಡೆದು, ಕಾಲಿನಿಂದ ಒದ್ದು, ಆಂಜನಿ ಎಂಬುವರು ಕೃಷ್ಣನ ಕೈಯಲ್ಲಿದ್ದ ಮಚ್ಚನ್ನು ತೆಗೆದು ನನ್ನ ತಲೆಗೆ ಹೊಡೆದಿರುತ್ತಾರೆ. ಆ ನಂತರ ನಾನು ಪ್ರಜ್ಞೆ ತಪ್ಪಿ ಬಿದ್ದಿರುತ್ತೇನೆ. ಚಾಸಾ-1 ರವರು ಅಂಬುಲೆನ್ಸ್ ಕರೆಯಿಸಿ ನನ್ನನ್ನು ಮಾಗಡಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತಾರೆ. ನನ್ನ ತಂದೆ ತಾಯಿ ಇಬ್ಬರಿಗೂ ಹೊಡೆದಿರುತ್ತಾರೆ. ನನಗೆ ಚಿಕಿತ್ಸೆ ಕೊಟ್ಟ ನಂತರ ಬೆಳಿಗ್ಗೆ 11 ಗಂಟೆಯ ಸಮಯದಲ್ಲಿ ಪ್ರಜ್ಞೆ ಬಂದಿರುತ್ತದೆ, ಸಂಜೆ 6.30 ಗಂಟೆಯ ಸಮಯದಲ್ಲಿ ಸದರಿ ಘಟನ ಸಂಬಂಧ ಚಾಸಾ-1 ರವರು ಕುದೂರು ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ. ಮರು ದಿನ ಪೋಲಿಸರು ಸದರಿ ಘಟನೆಯ ಬಗ್ಗೆ ಹೇಳಿಕೆ ಪಡೆದುಕೊಂಡಿರುತ್ತಾರೆ.

2. ಪೋಲಿಸರಿಗೆ ಘಟನ ಸ್ಥಳವನ್ನು ತೋರಿಸಿದ್ದು, ಸದರಿ ಸಮಯ ಬೆಳಿಗ್ಗೆ 10.30 ಗಂಟೆಯಾಗಿತ್ತು, ಸದರಿಯವರು ಸ್ಥಳ ಪರಿಶೀಲನೆ ಮಾಡಿ, ಮಹಜರ್ ಕ್ರಮ ಅನುಸರಿಸಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ. ಘಟನ ಸ್ಥಳದಲ್ಲಿ ಮರ ಕಡಿದ ಬಗ್ಗೆ ನಮೂದಿಸಿ ಮಚ್ಚನ್ನು ಅಮಾನತು ಪಡಿಸಿಕೊಂಡಿರುತ್ತಾರೆ, ಈಗ ನ್ಯಾಯಾಲಯದ ಮುಂದಿರುವ ಮಚ್ಚನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಒಂದು ದಾಖಲಾತಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಮಹಜರ್ ಆಗಿದ್ದು, ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ನಲ್ಲಿ ನಮೂದಿಸಿರುವ ಚಕ್ಕುಬಂದಿ ಪೂರ್ವಕ್ಕೆ-ಸರ್ವೆ ನಂಬರ್-3 ನಮ್ಮ ಜಮೀನು ಮತ್ತು ತೊರೆಹಳ್ಳ, ಪಶ್ಚಿಮಕ್ಕೆ-ನಮ್ಮ ಮನೆ ಮತ್ತು ತೊರೆಹಳ್ಳ, ಉತ್ತರ ಮತ್ತು ದಕ್ಷಿಣಕ್ಕೆ-ತೊರೆಹಳ್ಳ ಇರುತ್ತದೆ.

**ಸಿ.ಸಿ. ಸಂಖ್ಯೆ: 104 / 2016**
**ಚಾಸಾ-03 / ಪ್ರಾಸಾ-03**

**ಪಾಟೀ ಸವಾಲು :- ಶ್ರೀ. ಎಲ್.ಪಿ.ಎಸ್.** ವಕೀಲರಿಂದ **ಆರೋಪಿಗಳ** ಪರವಾಗಿ :-

ನನ್ನ ಮೇಲೆ ಸುಮಾರು 3 ಕ್ರಿಮಿನಲ್ ಪ್ರಕರಣಗಳು ಇದ್ದು, ಎರಡು ಪ್ರಕರಣಗಳು ವಜಾ ಆಗಿರುತ್ತದೆ. ಆರೋಪಿತರುಗಳು 2 ಸಣ್ಣ ಸಣ್ಣ ಮರಗಳನ್ನು ಕಡಿದು ಉರುಳಿಸಿದ್ದರು, ಸದರಿ ಮರಗಳು ಸುಮಾರು 5-6 ವರ್ಷದ ಹಳೆಯ ಮರಗಳಾಗಿದ್ದವು. ಸರ್ವೆ ನಂಬರ್-3 ರಲ್ಲಿ ಮರಗಳು ಇತ್ತು ಎಂದು ತೋರಿಸಲು ಸರ್ವೆ ಸ್ಕೆಚ್ ಕೊಟ್ಟಿರುತ್ತೇವೆ. ಸದರಿ ಘಟನೆ ಸಂಬಂಧಿಸಿದಂತೆ ಆರೋಪಿತರುಗಳು ಕೂಡ ನಿಮ್ಮ ವಿರುದ್ದ ದೂರು ದಾಖಲಿರುತ್ತಾರೆಂದರೆ ಸರಿ, ಸಾಕ್ಷಿ ಮುಂದುವರೆದು ನಾವು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ ಆರೋಪಿತರುಗಳು ಸುಳ್ಳು ದೂರು ದಾಖಲಿರುತ್ತಾರೆ ಎನ್ನುತ್ತಾರೆ. ಆರೋಪಿತರುಗಳು ನನ್ನ ತಮ್ಮನೊಂದಿಗೆ ಗಲಾಟೆ ಮಾಡುತ್ತಿದ್ದಾಗ ನಾನು ಮನೆಯಲ್ಲಿ ರಾತ್ರಿಪಾಳಿ ಕೆಲಸ ಮುಗಿಸಿ ಮನೆಯಲ್ಲಿ ಮಲಗಿದ್ದೆ. ನನಗೆ ಮಚ್ಚಿನಿಂದ ಹೊಡೆದ ಬಾಬ್ತು ಬಟ್ಟೆಗೆ ರಕ್ತವಾಗಿತ್ತು. ಸದರಿ ರಕ್ತಸಿಕ್ತ ಬಟ್ಟೆಯನ್ನು ಪೋಲಿಸರು ಬೇಡ ಎಂದಿರುತ್ತಾರೆ. ನಾನು ನೋಡಿದಾಗ ನನ್ನ ತಮ್ಮನಿಗೆ ಕೃಷ್ಣ ಎಂಬುವರು ಮಚ್ಚಿನಿಂದ ಬಲಗೈಗೆ ಹೊಡೆದಿರುತ್ತಾರೆ. ಎಂ.ಓ-1 ಮಚ್ಚಿನಿಂದಲೇ ನನಗೆ ಹೊಡೆದಿರುತ್ತಾರೆ.

2. ಗಂಗಾಧರ, ಪೂಜರಿ ಮತ್ತು ಹನುಮಂತಯ್ಯನವರು ಕಾಲು ಕೈಯಿಂದ ನನ್ನ ತಂದೆಗೆ ಹೊದ್ದಿದ್ದು, ಅಲ್ಲಿಯೇ ಬಿದ್ದಿದ್ದ ಮಣ್ಣಿನ ಎಂಟೆಯಿಂದ ಹೊಡೆದಿರುತ್ತಾರೆ. ನನ್ನ ತಾಯಿಗೆ ಸುನಂದ, ಗಂಗಾಧರ, ವಿಜಯಲಕ್ಷ್ಮೀ ರವರು ಹಿಡಿದು ಎಳೆದಾಡಿ ಕಾಲಿನಿಂದ ಒದ್ದಿರುತ್ತಾರೆ. ಕಡ್ಡಿಯಿಂದ ಯಾರು ಹೊಡೆದಿದ್ದಾರೆಂದು ಗಲಾಟೆಯಲ್ಲಿ ಗೊತ್ತಾಗಿರುವುದಿಲ್ಲ. ನಿಪಿ-2 ಮಹಜರ್ ವೇಳೆಯಲ್ಲಿ 3 ಜನರಿದ್ದು, ಅವರ ಜೊತೆ 2 ಪೋಲಿಸರು ಇದ್ದರು. ಎಂ.ಓ-1 ತೊರೆಹಳ್ಳದಲ್ಲಿ ಬಿದ್ದಿತ್ತು. ಎಂ.ಓ-1 ರಿಂದಲೇ ಹೊಡೆದಿರುತ್ತಾರೆಂದು

ತೋರಿಸಲು ಯಾವುದಾದರೂ ವಿಶೇಷ ಗುರುತು ಇದೆಯೇ ಎಂದರೆ ಸಾಕ್ಷಿ ಎಂ.ಓ-1 ರ ಹಿಂದಿನ ಭಾಗದಲ್ಲಿ ಕಟ್ ಆಗಿತ್ತು ಎನ್ನುತ್ತಾರೆ. ಎಂ.ಓ-1 ರ ರೀತಿ ಮಚ್ಚು ಎಲ್ಲಾ ಕಡೆ ಸಾಮಾನ್ಯವಾಗಿ ದೊರೆಯುತ್ತವೆ ಎಂದರೆ ಸಾಕ್ಷಿ ಎಂ.ಓ-1 ತೊರೆಯಲ್ಲಿ ಸಿಕ್ಕಿದ್ದು, ಹಿಂದಿನ ಹಿಡಿ ಕಟ್ ಆಗಿತ್ತು ಎನ್ನುತ್ತಾರೆ. ನಿಪಿ-2 ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಮಾಡಿರುತ್ತಾರೆ. ನಿಪಿ-2 ಕ್ಕೆ ನನ್ನ ಜೊತೆ ಚಾಸಾ-5 ಮತ್ತು 6 ರವರು ಸಹ ಸಹಿ ಮಾಡಿರುತ್ತಾರೆ. ನಿಪಿ-2 ರಲ್ಲಿ ಮರ ಕಡಿದ ವಿಚಾರವನ್ನು ಬರೆಯಲಾಗಿದೆ ಎಂದರೆ ಸಾಕ್ಷಿ ಸದರಿಯನ್ನು ನೋಡಿ ಫೋಟೋ ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ.

3. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಆರೋಪಿತರುಗಳು ನಮಗೆ ಯಾವುದೇ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರುಗಳು ಹೂಡಿರುವ ಪ್ರಕರಣದಲ್ಲಿ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆರೋಪಿತರುಗಳಿಗೆ ಹಲ್ಲೆ ಮಾಡಿದ್ದು, ಸದರಿಯವರು ದೂರು ದಾಖಲಿಸಬಹುದೆಂಬ ದುರುದ್ದೇಶದಿಂದ ನಾವೇ ಮುಂಚಿತವಾಗಿ ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರುಗಳು ಯಾವುದೇ ಹಲ್ಲೆ ಮಾಡಿಲ್ಲದೇ ಇರುವುದರಿಂದ ಎಂ.ಓ-1 ನಮ್ಮದೇ ಆಗಿದ್ದು, ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಜವಾಗಿಯು ರಕ್ತಗಾಯವಾಗಿದ್ದಲ್ಲಿ ಸದರಿ ರಕ್ತಸಿಕ್ತ ಬಟ್ಟೆಯನ್ನು ಪೋಲಿಸರಿಗೆ ನೀಡುತ್ತಿದ್ದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ಬಟ್ಟೆಯನ್ನು ನಾನು ಕವರ್ ಗೆ ಹಾಕಿ ಪೋಲಿಸರಿಗೆ ನೀಡಲು ಹೋದಾಗ ಪೋಲಿಸರು ಪಡೆದುಕೊಂಡಿಲ್ಲ ಎನ್ನುತ್ತಾರೆ. ನಾನು ಹೇಳುವಂತೆ ಕಡ್ಡಿಯಲ್ಲಿ ಹೊಡೆದಿದ್ದೆ ಆದಲ್ಲಿ ಸದರಿ ಕಡ್ಡಿಯನ್ನು ನಿಪಿ-2 ರ ಕಾಲದಲ್ಲಿ ಅಮಾನತು ಪಡಿಸಿಕೊಳ್ಳುತ್ತಿದ್ದರು

ಎಂದರೆ ಸಾಕ್ಷಿ ಸದರಿ ಕಡ್ಡಿ ಚೂರು ಚೂರು ಆಗಿತ್ತು ಎನ್ನುತ್ತಾರೆ. ನಿಪಿ-2 ಮಹಜರನ್ನು ಪೋಲಿಸ್ ಠಾಣೆಯಲ್ಲಿ ಪೋಲಿಸರೊಂದಿಗೆ ಶಾಮೀಲ್ ಆಗಿ ತಯಾರಿಸಿದ್ದು, ಪೋಲಿಸರು ಘಟನ ಸ್ಥಳಕ್ಕೆ ಬಂದು ಮಹಜರ್ ಕ್ರಮ ಅನುಸರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರುಗಳ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**